
## 01. ಉದಾತ್ತ ಚಿಂತನೆಗಳು

### 1. ಡಾ.ಬಿ.ಆರ್.ಅಂಬೇಡ್ಕರ್



ಡಾ.ಬಿ.ಆರ್.ಅಂಬೇಡ್ಕರ್



ಭಾರತ ರತ್ನ, ಭಾರತ ದೇಶದ ಪ್ರಥಮ ಕಾನೂನು ಮಂತ್ರಿ ಡಾ.ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ಭಾರತದ ನ್ಯಾಯಾಂಗ, ಸಾಮಾಜಿಕ ಮತ್ತು ರಾಜಕೀಯದ ಸುಧಾರಕರಾಗಿದ್ದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಮಧ್ಯಪ್ರದೇಶದ ಮೊವ್ ಸೇನಾ ಕಂಟೋನ್ಮೆಂಟ್‌ನಲ್ಲಿ ಕ್ರಿ.ಶ.1891ರ ಏಪ್ರಿಲ್ 14ರಂದು ಹುಟ್ಟಿದರು. ಅವರ ತಂದೆಯ ಹೆಸರು ರಾಮ್‌ಜಿ ಸಕ್ಪಾಲ್ ಮತ್ತು ತಾಯಿ ಭೀಮಾಬಾಯಿ. ತಂದೆ ಭಾರತೀಯ ಸೇನೆಯಲ್ಲಿ ಸುಬೇದಾರರಾಗಿದ್ದರು.

ಅಂಬೇಡ್ಕರ್ ರವರು ಮೂಲತಃ ಮಹಾರಾಷ್ಟ್ರದ ರತ್ನಗಿರಿ ಜಿಲ್ಲೆಯ ಖೇಡಾ ತಾಲ್ಲೂಕಿನ ಅಂಬೆವಾಡ ಗ್ರಾಮದವರು. ಭಾರತದ ಸಂವಿಧಾನ ರಚಿಸುವಲ್ಲಿ ಮಹತ್ತ್ವದ ವ್ಯಕ್ತಿ–ಶಕ್ತಿಯಾದ ಅವರನ್ನು **‘ಭಾರತೀಯ ಸಂವಿಧಾನ ಶಿಲ್ಪಿ’** ಎಂದು ಕರೆಯುತ್ತೇವೆ.

ಸಾಮಾಜಿಕ ಸಮಾನತೆ, ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಡಿದ ಮಹಾನ್ ಭಾರತೀಯ ನಾಯಕರಲ್ಲೊಬ್ಬರು. ಸ್ವಾತಂತ್ರ್ಯ ಕುರಿತು ಅವರ ಉದಾತ್ತವಾದ ಚಿಂತನೆಗಳನ್ನು ಈ ಭಾಗದಲ್ಲಿ ಅಧ್ಯಯನ ಮಾಡಬಹುದು.

ಸ್ವಾತಂತ್ರ್ಯ ಎರಡು ಬಗೆಯಾಗುತ್ತದೆ; ಅ) ಪೌರ ಸ್ವಾತಂತ್ರ್ಯ
ಆ) ರಾಜಕೀಯ ಸ್ವಾತಂತ್ರ್ಯ

ಅ) ಪೌರ ಸ್ವಾತಂತ್ರ್ಯ : ಪೌರ ಸ್ವಾತಂತ್ರ್ಯ ಈ ಅಂಶಗಳನ್ನು ಹೊಂದಿರುತ್ತದೆ.

**(1) ಚಲವಲನ ಸ್ವಾತಂತ್ರ್ಯ:** ಸೂಕ್ತ ನ್ಯಾಯಾಂಗ ಕ್ರಮವಿಲ್ಲದೆ ವ್ಯಕ್ತಿಯನ್ನು ಬಂಧಿಸುವಂತಿಲ್ಲದ್ದು. ಇದು ಮೂಲಭೂತವಾದದ್ದು. ಮೂಲ ಸ್ವರೂಪ ಮಾತ್ರದ್ದಲ್ಲ. ಅದು ಅತ್ಯಂತ ಅಗತ್ಯವಾದದ್ದೂ ಹೌದು. ಅದರ ಮೌಲ್ಯದ ಬಗ್ಗೆ ಯಾವುದೇ ಸಂದೇಹಕ್ಕೆ ಎಡೆಯಿಲ್ಲ.

**(2) ವಾಕ್ ಸ್ವಾತಂತ್ರ್ಯ:** (ಅಲೋಚನೆ, ಓದು, ಬರೆಹ, ಚರ್ಚೆ ಇವುಗಳ ಸ್ವಾತಂತ್ರ್ಯ ಇದರಲ್ಲೇ ಸೇರುತ್ತದೆ) ಇದನ್ನು ಅಭಿಪ್ರಾಯ ಸ್ವಾತಂತ್ರ್ಯ ಎಂದೂ ಹೇಳಬಹುದು. ಅದು ಅನೇಕ ಕಾರಣಗಳಿಂದ ಮಹತ್ತ್ವದ್ದಾಗುತ್ತದೆ. ಬೌದ್ಧಿಕ, ನೈತಿಕ, ರಾಜಕೀಯ ಮತ್ತು ಸಾಮಾಜಿಕ ಪ್ರಗತಿಗೆ ಅದು ಅತ್ಯಗತ್ಯ ಪರಿಸ್ಥಿತಿ. ಅದು ಇಲ್ಲದ ಕಡೆ ಪರಿಸ್ಥಿತಿ ಏಕತಾನದ್ದಾಗಿ, ಎಲ್ಲ ಬಗೆಯ ಚಲನಶೀಲತೆ ಕುಂದುತ್ತದೆ.

**(3) ಕ್ರಿಯಾ ಸ್ವಾತಂತ್ರ್ಯ :** ಕ್ರಿಯಾ ಸ್ವಾತಂತ್ರ್ಯವೆಂದರೆ, ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು. ಅದು ಔಪಚಾರಿಕವಾಗಿದ್ದರೆ ಸಾಲದು, ವಾಸ್ತವಿಕವಾಗಿ ಕೂಡ ಜಾರಿಯಲ್ಲಿರಬೇಕು. ಅದು ನಿರ್ದಿಷ್ಟ ಕಾರ್ಯಗಳನ್ನು ಮಾಡಲು ಇರುವ ಪರಿಣಾಮಕಾರಿಯಾದ ಸಾಮರ್ಥ್ಯವಾಗಬೇಕು. ಈ ಪ್ರಯೋಜನವನ್ನು ಪಡೆಯಲು ಸಾಧ್ಯವಿಲ್ಲದ ಕಡೆ ಸ್ವಾತಂತ್ರ್ಯವೂ ಇರುವುದಿಲ್ಲ.


ಶೋಷಣೆ ಎಲ್ಲಿ ಇಲ್ಲವಾಗಿದೆಯೋ ಒಂದು ವರ್ಗವು ಇನ್ನೊಂದು ವರ್ಗವನ್ನು ತುಳಿಯುತ್ತಿಲ್ಲವೋ, ಎಲ್ಲಿ ನಿರುದ್ಯೋಗವಿಲ್ಲವೋ, ಬಡತನವಿಲ್ಲವೋ. ಎಲ್ಲಿ ತನ್ನ ಕೆಲಸದ ಫಲವಾಗಿ ತನ್ನ ಕೆಲಸ, ಮನೆ, ಆಹಾರಗಳನ್ನು ಕಳೆದುಕೊಂಡು ಬಿಡುವ ಭೀತಿ ವ್ಯಕ್ತಿಗೆ ಇರುವುದಿಲ್ಲವೋ ಅಲ್ಲಿ ನಿಜವಾದ ಕ್ರಿಯಾ ಸ್ವಾತಂತ್ರ್ಯ ಇದೆ ಎಂದು ಹೇಳಬಹುದು.

**ಆ) ರಾಜಕೀಯ ಸ್ವಾತಂತ್ರ್ಯ :** ರಾಜಕೀಯ ಸ್ವಾತಂತ್ರ್ಯ ಇರುವುದು ವ್ಯಕ್ತಿಗೆ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ಪಾಲು ಇರುವ ಹಕ್ಕಿನಲ್ಲಿ. ಸರಕಾರ ಇರುವುದಾದರೂ ಜನರಿಗೆ ಜೀವನ, ಸ್ವಾತಂತ್ರ್ಯ, ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಸಲುವಾಗಿ. ಆದ್ದರಿಂದ ಸರಕಾರವು ಯಾರನ್ನು ರಕ್ಷಿಸುವುದು ತನ್ನ ಕರ್ತವ್ಯವಾಗಿದೆಯೋ, ಆ ಜನರಿಂದಲೇ ತನ್ನ ಅಧಿಕಾರವನ್ನೂ ಬಲವನ್ನೂ ಪಡೆದುಕೊಳ್ಳಬೇಕಾಗುತ್ತದೆ. ಆಳಲ್ಪಡುವವರ ಸಮ್ಮತಿಯಿಂದಲೇ ಸರಕಾರದ ಅಸ್ತಿತ್ವ, ಅಧಿಕಾರ ಮತ್ತು ಶಕ್ತಿ ಎಂದು ಹೇಳಿದಾಗ ಇರುವ ಅರ್ಥ ಇದೇ.


ವಾಸ್ತವವಾಗಿ ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ತ್ವದಿಂದ ಅನುಗಮನ ಮಾಡಿದ ತತ್ತ್ವವೇ ಸರಿ. ಏಕೆಂದರೆ ರಾಜಕೀಯವಾದ ಸಮಸ್ತ ಅಧಿಕಾರವೂ ಜನತೆಯಿಂದ ಬರುತ್ತದೆ. ತಮ್ಮ ಸಾರ್ವಜನಿಕವಾದ ಹಾಗೂ ಖಾಸಗಿಯಾದ ಜೀವನವನ್ನು ನಿರ್ದೇಶಿಸುವ, ನಿಯಂತ್ರಿಸುವ ಸಾಮರ್ಥ್ಯವನ್ನು ಅವರು ತಾವೇ ಹೊಂದಿರುತ್ತಾರೆಯೇ ಹೊರತು ಬೇರೆ ಯಾರೂ ಅಲ್ಲ ಎಂದು ಇದರ ಅರ್ಥವಾಗುತ್ತದೆ.

ಮುಕ್ತಸಮಾಜ ವ್ಯವಸ್ಥೆಯ ಈ ಎರಡು ಮೂಲ ಸಿದ್ಧಾಂತಗಳೂ ಪರಸ್ಪರ ಸಂಬಂಧಿಸಿವೆ. ಅವುಗಳನ್ನು ಬೇರ್ಪಡಿಸುವುದು ಸಾಧ್ಯವಿಲ್ಲ. ಮೊದಲನೆಯ ಸಿದ್ಧಾಂತವನ್ನು ಒಪ್ಪಿಕೊಂಡೊಡನೆ ಎರಡನೆಯ ಸಿದ್ಧಾಂತವು ತನಗೆ ತಾನೇ ಅನುಸರಿಸಿ ಬರುತ್ತದೆ. ಮಾನವ ವ್ಯಕ್ತಿತ್ವದ ಪಾವಿತ್ರ್ಯವನ್ನು ಒಪ್ಪಿಕೊಂಡರೆ, ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವಗಳ ಅಗತ್ಯವನ್ನೂ, ವ್ಯಕ್ತಿತ್ವ ವಿಕಾಸಕ್ಕೆ ತಕ್ಕ ಪರಿಸ್ಥಿತಿ ಎಂದು ಒಪ್ಪಿಕೊಳ್ಳಲೇಬೇಕಾಗುತ್ತದೆ.

## 02. ಮಹಾತ್ಮ ಗಾಂಧೀಜಿ



ಮಹಾತ್ಮ ಗಾಂಧೀಜಿ



ಭಾರತೀಯ ಸ್ವಾತಂತ್ರ್ಯ ಆಂದೋಲನದ ಕಾಲದಲ್ಲಿ ಭಾರತದ ರಾಜಕೀಯ ಹಾಗೂ ಅಧ್ಯಾತ್ಮಿಕ ನಾಯಕರಾಗಿದ್ದ ಮೋಹನ್‌ದಾಸ್ ಕರಮ್‌ಚಂದ್ ಗಾಂಧಿಯವರು ಕ್ರಿ.ಶ.1869ರ ಅಕ್ಟೋಬರ್ 2ರಂದು ಗುಜರಾತ್ ರಾಜ್ಯ ಪೋರಬಂದರ್‌ನಲ್ಲಿ ಜನಿಸಿದರು. ಅವರ ತಂದೆ ಕರಮ್‌ಚಂದ್ ಗಾಂಧಿ, ತಾಯಿ ಪುತಲೀಬಾಯಿ. ಭಾರತೀಯ ಜನರು ಅವರನ್ನು ಬಾಪೂಜೀ ಎಂದು ಸಂಬೋಧಿಸುತ್ತಿದ್ದರು.

ಸತ್ಯ ಮತ್ತು ಅಹಿಂಸೆಯ ಮೇಲೆ ಜೀವನವಿಡೀ ಪ್ರಯೋಗ ಮಾಡಿದ ಸಾಧಕ. ಅಹಿಂಸಾ ಮಾರ್ಗದಲ್ಲಿ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು. ಭಾರತೀಯ ಮಹಾಕೃತಿಗಳಲ್ಲಿನ **'ಶ್ರವಣ ಕುಮಾರನ ಪಿತೃ ಭಕ್ತಿ'** ಮತ್ತು **'ಹರಿಶ್ಚಂದ್ರ ಮಹಾರಾಜರ ಕಥೆಗಳು'** ಬಾಲ್ಯಾವಸ್ಥೆಯಲ್ಲಿದ್ದಾಗ ಗಾಂಧಿಯವರ ಮೇಲೆ ಭಾರೀ ಪ್ರಭಾವ ಬೀರಿದ್ದವು.

ಗಾಂಧೀಜೀಯವರೇ ಹೇಳಿದಂತೆ ಅವರ ಜೀವನ ಕ್ರಮವನ್ನೇ ಬದಲು ಮಾಡಿದ ಗ್ರಂಥ, ಜಾನ್ ರಸ್ಕಿನ್ನನ **'ಅನ್‌ಟು ದಿ ಲಾಸ್ಟ್.'** ಜೋಹಾನ್ಸ ಬರ್ಗ್ ನಿಂದ ಡರ್ಬಿನ್ನಿಗೆ ರೈಲಿನಲ್ಲಿ ಪ್ರಯಾಣ ಮಾಡುವಾಗ ಓದಿದ ಪುಸ್ತಕ. ಅವರ ಮಾತಿನಲ್ಲೇ ಹೇಳುವುದಾದರೆ, **"ನಾನು ಆ ದಿನ ರಾತ್ರಿ ನಿದ್ದೆ ಮಾಡಲಾಗಲಿಲ್ಲ. ನಾನು, ನನ್ನ ಜೀವನವನ್ನು ಆ ಪುಸ್ತಕದಲ್ಲಿ ಹೇಳಿದ ಆದರ್ಶಗಳಿಗೆ ಅನುಗುಣವಾಗಿ ಬದಲಾಯಿಸಿಕೊಳ್ಳಲು ನಿರ್ಧರಿಸಿದೆ"** ಎಂದು ತಮ್ಮ ಆತ್ಮಚರಿತ್ರೆ **'ಮೈ ಎಕ್ಸ್‌ಪೀರಿಮೆಂಟ್ಸ್ ವಿಥ್ ಟ್ರೂತ್'** ನಲ್ಲಿ ಹೇಳಿಕೊಂಡಿದ್ದಾರೆ.

**ಬರೆವಣಿಗೆ ಉತ್ತಮ ಶಿಕ್ಷಣದ ಭಾಗ**

ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ, ಶಿಕ್ಷಣದ ಆವಶ್ಯಕ ಅಂಶವಲ್ಲವೆಂಬ ಭಾವನೆ ನನಗೆ ಹೇಗೆ ಬಂತೋ ಕಾಣೆ. ಇಂಗ್ಲೆಂಡ್‌ಗೆ ಹೋಗುವವರೆಗೆ ನನ್ನಲ್ಲಿ ಇದೇ ಭಾವನೆ ಇತ್ತು. ಅನಂತರ ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ, ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತಿದ್ದ ಸುಂದರ ಬರೆವಣಿಗೆ ನೋಡಿ, ನನಗೆ ನಾಚಿಕೆಯೂ ಪಶ್ಚಾತ್ತಾಪವೂ ಉಂಟಾಯಿತು. ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ನಾನು ಅರಿತೆನು. ಈಚೆಗೆ ನನ್ನ ಬರಹವನ್ನು ತಿದ್ದಿಕೊಳ್ಳಬೇಕೆಂದು ಪ್ರಯತ್ನಿಸಿದೆ. ಸುಟ್ಟಮಡಕೆಗೆ ಹಸಿಮಣ್ಣನ್ನು ಮೆತ್ತಲು ಸಾಧ್ಯವೆ? ಆ ವೇಳೆಗೆ ಕಾಲ ಮೀರಿ ಹೋಗಿತ್ತು. ಚಿಕ್ಕವಯಸ್ಸಿನಲ್ಲಿ ಅಸಡ್ಡೆ ಮಾಡಿದುದನ್ನು ತಿದ್ದಿಕೊಳ್ಳಲು ಆಗಲಿಲ್ಲ. ನನ್ನ ಉದಾಹರಣೆಯಿಂದ ಒಳ್ಳೆಯ ಬರೆವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಲಿ ಎಂಬುದು ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವಾಗಿದೆ.

**ಗಾಂಧೀಜಿಯವರ ಮೇಲೆ 'ಅನ್‌ಟು ದಿಸ್ ಲಾಸ್ಟ್' ಕೃತಿಯ ಪ್ರಭಾವ**

ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಎಂಬ ಪುಸ್ತಕವನ್ನು ಓದಲು ಪ್ರಾರಂಭಿಸಿದುದೇ ತಡ, ಅದನ್ನು ಕೆಳಗಿಳಿಸಲು ಸಾಧ್ಯವಾಗಲಿಲ್ಲ. ಅದು ನನ್ನ ಮನಸ್ಸನ್ನು ಸೆರೆಹಿಡಿಯಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ನನ್ನ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಾನು ನಿರ್ಣಯಿಸಿಕೊಂಡೆ.

ನನ್ನ ವಿದ್ಯಾಭ್ಯಾಸದ ಕಾಲದಲ್ಲಿ ಪಠ್ಯಪುಸ್ತಕಗಳ ಹೊರತು ಮತ್ತೇನನ್ನೂ ಓದಲಿಲ್ಲವೆಂದು ಹೇಳಬಹುದು. ನಾನು ಜೀವನದ ಕರ್ಮರಂಗವನ್ನು ಪ್ರವೇಶಿಸಿದ ಮೇಲೆ, ಏನನ್ನೂ ಓದಲು ನನಗೆ ಸಮಯವೇ ದೊರೆಯಲಿಲ್ಲ. ಆದುದರಿಂದ ನನಗೆ ಹೆಚ್ಚಾದ ಪುಸ್ತಕ ಜ್ಞಾನವಿದೆಯೆಂದು ಹೇಳಲಾರೆ.

ನನ್ನ ಮಿತವಾದ ವ್ಯಾಸಂಗ ನಾನು ಓದಿದುದನ್ನು ಚೆನ್ನಾಗಿ ಅರಗಿಸಿಕೊಳ್ಳಲು ಸಾರಥ್ಯಮಾಡಿದೆ. ಇವುಗಳ ಪೈಕಿ, ಬಾಳಿನಲ್ಲಿ ತತ್‌ಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿದುದು **'ಅನ್‌ಟು ದಿಸ್ ಲಾಸ್ಟ್'** ಎಂಬ ಪುಸ್ತಕ. ಅನಂತರ ನಾನು ಆ ಪುಸ್ತಕವನ್ನು ಸರ್ವೋದಯವೆಂಬ ಹೆಸರಿನಿಂದ ಗುಜರಾತಿ (ಭಾಷೆ)ಗೆ ಅನುವಾದ ಮಾಡಿದೆ.


**ಅನ್‌ಟು ದಿಸ್ ಲಾಸ್ಟ್ ಗ್ರಂಥದ ಸಿದ್ಧಾಂತಗಳನ್ನು ನಾನು ಹೀಗೆ ತಿಳಿದೆ.**

1. ಎಲ್ಲರ ಒಳ್ಳೆಯದರಲ್ಲಿಯೇ ನಮ್ಮ ಒಳ್ಳೆಯದು ಅಡಗಿದೆ.
2. ವಕೀಲನ ಕೆಲಸಕ್ಕೆ ಇರುವ ಬೆಲೆಯೇ ಕ್ಷೌರಿಕನ ಕೆಲಸಕ್ಕೂ ಇದೆ. ತಮ್ಮ ಕೆಲಸದಿಂದ ಜೀವನ ನಿರ್ವಹಿಸಲು ಎಲ್ಲರಿಗೂ ಸಮಾನವಾದ ಹಕ್ಕಿದೆ.
3. ಶ್ರಮ ಜೀವಿಯ ಜೀವನ, ಉಳುವವನ ಅಥವ ಕೈಕಸುಬುಗಾರನ ಜೀವನವೇ ಯೋಗ್ಯ ಜೀವನ.

## 03. ಸ್ವಾಮಿ ವಿವೇಕಾನಂದರು



ಸ್ವಾಮಿ ವಿವೇಕಾನಂದರು



ಸ್ವಾಮಿ ವಿವೇಕಾನಂದರು ಭಾರತದ ಆಧ್ಯಾತ್ಮಿಕ ಶಕ್ತಿ. ಯುವಕರಿಗೆ ಸ್ಪೂರ್ತಿ ಕಿರಣ, ಅತ್ಯಂತ ಪ್ರಸಿದ್ಧ ಮತ್ತು ಪ್ರಭಾವಶಾಲಿ ತತ್ವಜ್ಞಾನಿಗಳಲ್ಲಿ ಒಬ್ಬರು. ನಿರ್ಭಯತೆ, ಆಶಾವಾದ ಮತ್ತು ಸಾಮಾಜಿಕ ಸಮಸ್ಯೆಗಳ ಬಗೆಗಿನ ವಿಶಾಲ ದೃಷ್ಟಿಯ ಸಂಕೇತವಾಗಿ ಪರಿಗಣಿತವಾಗಿದ್ದಾರೆ.

ಇವರು 1863ರ ಜನವರಿ 12ರಂದು ಕಲ್ಕತ್ತದಲ್ಲಿ ಜನಿಸಿದರು. ಇವರ ತಂದೆ ವಿಶ್ವನಾಥದತ್ತ ತಾಯಿ ಭುವನೇಶ್ವರಿ ದೇವಿ. ವಿವೇಕಾನಂದರ ಪೂರ್ವದ ಹೆಸರು ನರೇಂದ್ರನಾಥದತ್ತ. ಇವರು ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯರಾದ ಮೇಲೆ **'ವಿವೇಕಾನಂದ'** ಎಂಬ ಹೆಸರನ್ನು ಪಡೆದರು. **'ರಾಮಕೃಷ್ಣ ಮಿಷನ್'** ಸ್ಥಾಪಕರು.

**"ಯುವಕರೇ ಏಳಿ ಎದ್ದೇಳಿ ಗುರಿ ಮುಟ್ಟುವತನಕ ನಿಲ್ಲದಿರಿ"** ಎಂದು ಹೇಳುವುದರ ಮೂಲಕ ಯುವಕರ ಸ್ಪೂರ್ತಿಯ ಸೆಲೆಯಾದರು. ಇವರ ಜನ್ಮದಿನವನ್ನು **"ರಾಷ್ಟ್ರೀಯ ಯುವ ದಿನ"** ಎಂದು ಆಚರಿಸಲಾಗುತ್ತದೆ. ಇವರ ಚಿಂತನೆಗಳು ಸರ್ವರ ಸಹಬಾಳ್ವೆಗೆ, ಸಾಮಾಜಿಕ ವಿಕಾಸಕ್ಕೆ ಪೂರಕವಾದವು. ಆದ್ದರಿಂದ ಅವರ ಕೆಲವು ಉದಾತ್ತ ಚಿಂತನೆಗಳನ್ನು ಇಲ್ಲಿ ಓದೋಣ.

**ಸಂಸ್ಕೃತಿ**

ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಿ. ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಆದರೆ ಅವರಿಗೆ ಮತ್ತೊಂದು ಆವಶ್ಯಕತೆ ಇದೆ. ಅದು ಸಂಸ್ಕೃತಿ. ನೀವು ಅವರಿಗೆ ಇದನ್ನು ಕೊಡುವ ತನಕ ಅವರ ಪ್ರಗತಿ ಸ್ಥಿರವಾಗಲಾರದು. ಸಂಸ್ಕೃತಿ ಮಾತ್ರ ಆಘಾತವನ್ನು ಸಹಿಸಬಲ್ಲದು. ಕೇವಲ ಜ್ಞಾನರಾಶಿಗೆ ಅದನ್ನು ಎದುರಿಸುವ ಶಕ್ತಿ ಇಲ್ಲ. ಜಗತ್ತಿಗೆ ಜ್ಞಾನರಾಶಿಯನ್ನೇ ಕೊಡಬಹುದು. ಆದರೆ ಅದರಿಂದ ಹೆಚ್ಚು ಪ್ರಯೋಜನವಿಲ್ಲ. ಸಂಸ್ಕೃತಿಯು ರಕ್ತದಲ್ಲಿ ಹರಿಯಬೇಕು. ಆಧುನಿಕ ಕಾಲದಲ್ಲಿ ಬೇಕಾದಷ್ಟು ಜ್ಞಾನಸಂಪತ್ತನ್ನು ಪಡೆದ ದೇಶಗಳನ್ನು ನೋಡಿರುವೆವು. ಆದರೆ ಅದರಿಂದ ಏನು ಪ್ರಯೋಜನ? ಅವರು ಕಾಡುಜನರಂತೆ ಇರುವರು. ಅವರಲ್ಲಿ ಸಂಸ್ಕೃತಿ ಇಲ್ಲ. ನಮ್ಮ ಶಾಸ್ತ್ರಗಳಲ್ಲಿ ಹುದುಗಿರುವ, ಮಠ ಮತ್ತು ಅರಣ್ಯಗಳಲ್ಲಿ ಅಡಗಿರುವ ಕೆಲವೇ ವ್ಯಕ್ತಿಗಳ ಸ್ವತ್ತಾಗಿರುವ ಆಧ್ಯಾತ್ಮಿಕ ರತ್ನಗಳನ್ನು ದೇಶ ಭಾಷೆಗಳ ಮೂಲಕ ಜನರಿಗೆ ಪ್ರಚಾರ ಮಾಡಬೇಕು.

**ವೇದವೇದಾಂತಗಳು**

ವೇದವೇದಾಂತಗಳ ಮುಖ್ಯ ಪಲ್ಲವಿಯೇ ಶ್ರದ್ಧೆ. ಯಾವ ಶ್ರದ್ಧೆಯ ಮೂಲಕ ನಚಿಕೇತನು ಯಮರಾಜನನ್ನು ಕೂಡ ಸಂದರ್ಶಿಸಿ ಪ್ರಶ್ನೆ ಮಾಡುವುದಕ್ಕೆ ಧೈರ್ಯ ಹೊಂದಿದನೋ, ಯಾವ ಶ್ರದ್ಧೆಯ ಮೂಲಕ ಪ್ರಪಂಚ ಚಲಿಸುತ್ತಿರುವುದೋ– ಅಂತಹ ಶ್ರದ್ಧೆಯು ನಾಶವಾಗುತ್ತಿದೆ. ಇದರ ಪರಿಹಾರಕ್ಕಾಗಿ ಮೊದಲು ಆತ್ಮಜ್ಞಾನ ಪ್ರಚಾರವಾಗಬೇಕು. ಯಾರೂ ದುರ್ಬಲರಲ್ಲ. ಆತ್ಮ ಸರ್ವಶಕ್ತ, ಸರ್ವಜ್ಞ, ಏಳಿ, ಯಾರಿಗೂ ಮಣಿಯಬೇಡಿ. ನಿಮ್ಮಲ್ಲಿರುವ ಭಗವಂತನನ್ನು ವ್ಯಕ್ತಗೊಳಿಸಿ. ಅದನ್ನು ಅಲ್ಲಗಳೆಯಬೇಡಿ. ಏಳಿ, ದುರ್ಬಲತೆಯ ಪರವಶತೆಯಿಂದ ಪಾರಾಗಿ. ಪಾರಾಗುವುದಕ್ಕೆ ಮಾರ್ಗ ನಿಮ್ಮ ಶಾಸ್ತ್ರಗಳಲ್ಲಿಯೇ ಇದೆ. ನಿಜವಾದ ಆತ್ಮನ ವಿಷಯವನ್ನು ನೀವು ಕೇಳಿ, ಇತರರಿಗೆ ಬೋಧಿಸಿ, ನಿದ್ರಿಸುವವರನ್ನು ಎಬ್ಬಿಸಿ. ಅವರು ಹೇಗೆ ಜಾಗೃತರಾಗುತ್ತಾರೆ ಎಂಬುದನ್ನು ನೋಡಿ. ಆಗ ಶಕ್ತಿ ಬರುವುದು, ಮಹಿಮೆ ಬರುವುದು, ಶ್ರೇಯಸ್ಸು ಬರುವುದು, ಪಾವಿತ್ರ್ಯ ಬರುವುದು. ಈಗ ನಿದ್ರಿಸುತ್ತಿರುವ ಜೀವ ಜಾಗೃತವಾಗಿ ಕಾರ್ಯೋನ್ಮುಖನಾಗುವಾಗ ಅವನಲ್ಲಿ ಎಲ್ಲ ಕಲ್ಯಾಣ ಗುಣಗಳೂ ಬರುವುವು.

ನಿಮ್ಮ ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣ ನಿಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಿ, ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ, ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಿ. ಅನಂತರ ನೀವು ಎಷ್ಟೇ ಅಲ್ಪವನ್ನು ಸಾಧಿಸಿದ್ದರೂ ನೀವು ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದಿರಿ ಎಂಬ ತೃಪ್ತಿಯಾದರೂ ಇರುತ್ತದೆ. ಈ ಆತ್ಮದ ಅನಂತ ಶಕ್ತಿಯನ್ನು ಭೌತಿಕ ಪ್ರಪಂಚದ ಮೇಲೆ ಬೀರಿದರೆ ಹಲವು ಭೌತಿಕ ಬೆಳವಣಿಗೆಗಳಾಗುವುವು. ಆಲೋಚನಾ ಪ್ರಪಂಚದ ಮೇಲೆ ಬೀರಿದರೆ ಬುದ್ಧಿ ತನ್ನ ಪರಾಕಾಷ್ಠೆಯನ್ನು ಮುಟ್ಟುವುದು, ತನ್ನ ಮೇಲೆಯೇ ಅದನ್ನು ಬೀರಿಕೊಂಡರೆ ಮಾನವನನ್ನು ದೇವನನ್ನಾಗಿ ಮಾಡುವುದು. ಮೊದಲು ನಾವು ದೇವರಾಗೋಣ. ಅನಂತರ ಇತರರು ದೇವರಾಗಲು ಅವರಿಗೆ ಸಹಾಯ ಮಾಡೋಣ. ಆದ್ದರಿಂದ ಆರ್ಯಮಾತೆಯ ಪುತ್ರರಿರಾ ಎಚ್ಚರಗೊಳ್ಳಿ, ಎದ್ದೇಳಿ; ಸೋಮಾರಿಗಳಾಗಬೇಡಿ; ಗುರಿಯು ದೊರಕುವವರೆಗೂ ನಿಲ್ಲಬೇಡಿ.

### ಅಭ್ಯಾಸ ಪ್ರಶ್ನೋತ್ತರಗಳು

**ಅ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿ.(ಒಂದು ಅಂಕದ ಪ್ರಶ್ನೆಗಳು)**

**1. ಕ್ರಿಯಾ ಸ್ವಾತಂತ್ರ್ಯ ಎಂದರೇನು?**

**ಉತ್ತರ:** ಕ್ರಿಯಾ ಸ್ವಾತಂತ್ರ್ಯವೆಂದರೆ, ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು.

**2. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?**

**ಉತ್ತರ:** ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವೆಂದರೆ ಆಯ್ಕೆಯಾದ ವ್ಯಕ್ತಿಗೆ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ಪಾಲು ಇರುವ ಹಕ್ಕಿನಲ್ಲಿ ಎಂದು ಹೇಳಬಹುದು.

**3. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?**

**ಉತ್ತರ :** ಅಂದವಾದ ಅಕ್ಷರ, ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದು ಗಾಂಧೀಜಿಯವರು ಅಭಿಪ್ರಾಯವಾಗಿದೆ.

**4. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?**
**ಉತ್ತರ:** ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಜನರಿಗೆ ದೇಶದ ಭಾಷೆಯಲ್ಲಿ ಸಂಸ್ಕೃತಿಯನ್ನು ನೀಡಿದಾಗ ದೇಶದ ಪ್ರಗತಿ ಸ್ಥಿರವಾಗುವುದು.
**5. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ?**
**ಉತ್ತರ :** ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಿ, ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಬೇಕು ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ.

**6. ಪೌರ ಸ್ವಾತಂತ್ರ್ಯದಲ್ಲಿನ ಬಗೆಗಳಾವುವು?**
**ಉತ್ತರ:** ಪೌರ ಸ್ವಾತಂತ್ರ್ಯದಲ್ಲಿ ಮೂರು ಬಗೆಗಳಿವೆ ಅವುಗಳೆಂದರೆ

1. ಚಲನವಲನ ಸ್ವಾತಂತ್ರ್ಯ 2. ವಾಕ್ ಸ್ವಾತಂತ್ರ್ಯ 3. ಕ್ರಿಯಾ ಸ್ವಾತಂತ್ರ್ಯ.

**7. ರಾಜಕೀಯ ಸ್ವಾತಂತ್ರ್ಯ ಎನ್ನುವುದು ಯಾವುದರಿಂದ ಅನುಗಮನ ಮಾಡಿದ ತತ್ತ್ವವಾಗಿದೆ ?**
**ಉತ್ತರ:** ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ತ್ವದಿಂದ ಅನುಗಮನ ಮಾಡಿದ ತತ್ತ್ವವಾಗಿದೆ.
**8. ಕೆಟ್ಟ ಅಕ್ಷರದ ಬರವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಗಾಂಧೀಜಿಯವರು ಯಾವಾಗ ಅರಿತರು?**
**ಉತ್ತರ:** ಕೆಟ್ಟ ಅಕ್ಷರದ ಬರವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಗಾಂಧೀಜಿಯವರು ದಕ್ಷಿಣ ಆಫ್ರಿಕಾಕ್ಕೆ ಹೋದಾಗ ಅರಿತರು.
**9. ಗಾಂಧೀಜಿಯವರ ಮೇಲೆ ಪ್ರಭಾವ ಬೀರಿದ ರಸ್ಕಿನ್‌ನ ಕೃತಿ ಯಾವುದು?**
**ಉತ್ತರ:** ಗಾಂಧೀಜಿಯವರ ಮೇಲೆ ಪ್ರಭಾವ ಬೀರಿದ ರಸ್ಕಿನ್ ನ ಕೃತಿ **'ಅನ್‌ಟು ದಿಸ್ ಲಾಸ್ಟ್'.**

**10. ವೇದವೇದಾಂತಗಳ ಮುಖ್ಯ ಪಲ್ಲವಿ ಯಾವುದು?**
**ಉತ್ತರ:** ವೇದವೇದಾಂತಗಳ ಮುಖ್ಯ ಪಲ್ಲವಿಯೇ ಶ್ರದ್ಧೆ.

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.(ಎರಡು ಅಂಕದ ಪ್ರಶ್ನೆಗಳು)**
**1. ಕ್ರಿಯಾ ಸ್ವಾತಂತ್ರ್ಯ ಎಂದರೇನು?**
**ಉತ್ತರ:** ಕ್ರಿಯಾ ಸ್ವಾತಂತ್ರ್ಯವೆಂದರೆ, ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ ಅವಕಾಶವಿರುವುದು. ಅದು ಔಪಚಾರಿಕವಾಗಿ, ವಾಸ್ತವಿಕವಾಗಿ ಜಾರಿಯಲ್ಲಿರಬೇಕು. ನಿರ್ದಿಷ್ಟ ಕಾರ್ಯಗಳನ್ನು ಮಾಡಲು ಇರುವ ಪರಿಣಾಮಕಾರಿಯಾದ ಸಾಮರ್ಥ್ಯವಾಗಬೇಕು. ಶೋಷಣೆ ಎಲ್ಲಿ ಇಲ್ಲವಾಗಿದೆಯೋ ಒಂದು ವರ್ಗವು ಇನ್ನೊಂದು ವರ್ಗವನ್ನು ತುಳಿಯುತ್ತಿಲ್ಲವೋ, ಎಲ್ಲಿ ನಿರುದ್ಯೋಗವಿಲ್ಲವೋ, ಬಡತನವಿಲ್ಲವೋ. ಎಲ್ಲಿ ತನ್ನ ಕೆಲಸದ ಫಲವಾಗಿ ತನ್ನ ಕೆಲಸ, ಮನೆ, ಆಹಾರಗಳನ್ನು ಕಳೆದುಕೊಂಡು ಬಿಡುವ ಭೀತಿ ವ್ಯಕ್ತಿಗೆ ಇರುವುದಿಲ್ಲವೋ ಅಲ್ಲಿ ನಿಜವಾದ ಕ್ರಿಯಾ ಸ್ವಾತಂತ್ರ್ಯ ಇದೆ ಎಂದು ಹೇಳಬಹುದು.
**2. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?**
**ಉತ್ತರ:** ರಾಜಕೀಯ ಸ್ವಾತಂತ್ರ್ಯ ಇರುವುದು ವ್ಯಕ್ತಿಗೆ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ಪಾಲು ಇರುವ ಹಕ್ಕಿನಲ್ಲಿ. ಸರಕಾರ ಇರುವುದಾದರೂ ಜನರಿಗೆ ಜೀವನ, ಸ್ವಾತಂತ್ರ್ಯ, ಸಂತೋಷಾನ್ವೇಷಣೆಗಳನ್ನು ಒದಗಿಸಿ ಕೊಡುವ ಸಲುವಾಗಿ. ವಾಸ್ತವವಾಗಿ ರಾಜಕೀಯ ಸ್ವಾತಂತ್ರ್ಯ ಎನ್ನುವುದು ಮಾನವ ವ್ಯಕ್ತಿತ್ವ ಮತ್ತು ಸಮಾನತೆಗಳ ತತ್ತ್ವದಿಂದ ಅನುಗಮನ ಮಾಡಿದ ತತ್ತ್ವವೇ ಸರಿ.
**3. ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?**
**ಉತ್ತರ :** ಅಂದವಾದ ಅಕ್ಷರ, ಒಳ್ಳೆಯ ಬರವಣಿಗೆ, ಶಿಕ್ಷಣದ ಆವಶ್ಯಕ ಅಂಶವಲ್ಲವೆಂಬ ಭಾವನೆ ಇಂಗ್ಲೆಂಡ್‌ಗೆ ಹೋಗುವವರೆಗೆ ಗಾಂಧೀಜಿಯವರಲ್ಲಿತ್ತು. ಅನಂತರ ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ, ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತಿದ್ದ ಸುಂದರ ಬರವಣಿಗೆ ನೋಡಿ, ಅವರಿಗೆ ನಾಚಿಕೆಯೂ ಪಶ್ಚಾತ್ತಾಪವೂ ಉಂಟಾಯಿತು. ಕೆಟ್ಟ ಅಕ್ಷರದ ಬರವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಅರಿತರು. ಒಳ್ಳೆಯ ಬರವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಲಿ ಎಂಬುದು ಅಂದವಾದ ಬರವಣಿಗೆಯ ಬಗ್ಗೆ ಗಾಂಧೀಜಿಯವರು ಅಭಿಪ್ರಾಯವಾಗಿದೆ.
**4. 'ಅನ್‌ಟು ದಿಸ್ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ಪರಿಣಾಮ ಬೀರಿತು?**
**ಉತ್ತರ:** ಗಾಂಧೀಜಿಯವರಿಗೆ ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಎಂಬ ಪುಸ್ತಕವನ್ನು ಓದಲು ಪ್ರಾರಂಭಿಸಿದುದೇ ತಡ, ಅದನ್ನು ಕೆಳಗಿಳಿಸಲು ಸಾಧ್ಯವಾಗಲಿಲ್ಲ. ಅದು ಅವರ ಮನಸ್ಸನ್ನು ಸೆರೆಹಿಡಿಯಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ಜೀವನವನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡರು. ಅವರ ಬಾಳಿನಲ್ಲಿ ತತ್‌ಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿದುದು 'ಅನ್‌ಟು ದಿಸ್ ಲಾಸ್ಟ್' ಎಂಬ ಈ ಪುಸ್ತಕ. ಅನಂತರ ಆ ಪುಸ್ತಕವನ್ನು ಸರ್ವೋದಯವೆಂಬ ಹೆಸರಿನಿಂದ ಗುಜರಾತಿ ಭಾಷೆಗೆ ಅನುವಾದ ಮಾಡಿದರು.
**5. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?**
**ಉತ್ತರ** : ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಬೇಕು. ಅಂದಾಗ ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಇದರ ಜೊತೆಯಲ್ಲಿ ಅವರಿಗೆ ಮತ್ತೊಂದು ಆವಶ್ಯಕತೆ ಇದೆ. ಅದು ಸಂಸ್ಕೃತಿ. ಅವರಿಗೆ ಈ ಸಂಸ್ಕೃತಿಯನ್ನು ಕೊಟ್ಟಾಗ ದೇಶದ ಪ್ರಗತಿ ಸ್ಥಿರವಾಗವುದು.
**6. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯ?**
**ಉತ್ತರ :** ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣ ನಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಬೇಕು. ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಬೇಕು. ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಿ ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದಾಗ ಬಾಳಿನಲ್ಲಿ ತೃಪ್ತಿ ದೊರಕುತ್ತದೆ ಎಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ.

**7. ವಾಕ್ ಸ್ವಾತಂತ್ರ್ಯದ ಮಹತ್ತ್ವವೇನು ?**

**ಉತ್ತರ :** ವಾಕ್ ಸ್ವಾತಂತ್ರ್ಯದಲ್ಲಿ ಅಲೋಚನೆ, ಓದು, ಬರೆಹ, ಚರ್ಚೆ ಸೇರುತ್ತದೆ. ಇದನ್ನು ಅಭಿಪ್ರಾಯ ಸ್ವಾತಂತ್ರ್ಯ ಎಂದೂ ಹೇಳಬಹುದು. ಅದು ಅನೇಕ ಕಾರಣಗಳಿಂದ ಮಹತ್ತ್ವದ್ದಾಗುತ್ತದೆ. ಬೌದ್ಧಿಕ, ನೈತಿಕ, ರಾಜಕೀಯ ಮತ್ತು ಸಾಮಾಜಿಕ ಪ್ರಗತಿಗೆ ಅದು ಅತ್ಯಗತ್ಯ ಪರಿಸ್ಥಿತಿ. ಅದು ಇಲ್ಲದ ಕಡೆ ಪರಿಸ್ಥಿತಿ ಏಕತಾನದ್ದಾಗಿ, ಎಲ್ಲ ಬಗೆಯ ಚಲನಶೀಲತೆ ಕುಂದುತ್ತದೆ.

**8. ಗಾಂಧೀಜಿಯವರು ತಿಳಿದಂತೆ ಅನ್‌ಟು ದಿಸ್ ಲಾಸ್ಟ್ ಗ್ರಂಥದ ಸಿದ್ಧಾಂತಗಳು ಯಾವುವು?**

**ಉತ್ತರ :** ಗಾಂಧೀಜಿಯವರು ತಿಳಿದಂತೆ ಅನ್‌ಟು ದಿಸ್ ಲಾಸ್ಟ್ ಗ್ರಂಥದ ಸಿದ್ಧಾಂತಗಳೆಂದರೆ

1. ಎಲ್ಲರ ಒಳ್ಳೆಯದರಲ್ಲಿಯೇ ನಮ್ಮ ಒಳ್ಳೆಯದು ಅಡಗಿದೆ.
2. ವಕೀಲನ ಕೆಲಸಕ್ಕೆ ಇರುವ ಬೆಲೆಯೇ ಕ್ಷೌರಿಕನ ಕೆಲಸಕ್ಕೂ ಇದೆ. ತಮ್ಮ ಕೆಲಸದಿಂದ ಜೀವನ ನಿರ್ವಹಿಸಲು ಎಲ್ಲರಿಗೂ ಸಮಾನವಾದ ಹಕ್ಕಿದೆ.
3. ಶ್ರಮ ಜೀವಿಯ ಜೀವನ, ಉಳುವವನ ಅಥವ ಕೈಕಸುಬುಗಾರನ ಜೀವನವೇ ಯೋಗ್ಯ ಜೀವನ.

**9. ನಿಜವಾದ ಆತ್ಮನ ವಿಷಯವನ್ನು ಕೇಳಿ, ಇತರರಿಗೆ ಬೋಧಿಸಿದಾಗ ಏನಾಗುತ್ತದೆ?**

**ಉತ್ತರ :** ನಿಜವಾದ ಆತ್ಮನ ವಿಷಯವನ್ನು ಕೇಳಿ, ಇತರರಿಗೆ ಬೋಧಿಸಿದಾಗ, ನಿದ್ರಿಸುವವರು ಎಚ್ಚರಗೊಳ್ಳುತ್ತಾರೆ.. ಜಾಗೃತರಾಗುತ್ತಾರೆ. ಅವರಿಗೆ ಶಕ್ತಿ, ಮಹಿಮೆ, ಶ್ರೇಯಸ್ಸು, ಪಾವಿತ್ರ್ಯ ಬರುವುದು. ನಿದ್ರಿಸುತ್ತಿರುವ ಜೀವ ಜಾಗೃತವಾಗಿ ಕಾರ್ಯೋನ್ಮುಖನಾಗುವಾಗ ಅವರಲ್ಲಿ ಎಲ್ಲ ಕಲ್ಯಾಣ ಗುಣಗಳೂ ಬರುವವು.

ಸತ್ಯಂ ಶಿವಂ ಸುಂದರಂ
ಜ್ಞಾನದೀಪ
ರಚನೆ–ಸಂಗ್ರಹ–ಹಂಚಿಕೆ